





# ‘ಪದ್ಮಾವತಿ’ಯ ಕೋಟೆಯಲ್ಲಿ..

‘ಪದ್ಮಾವತಿ’ಯ ಸಿನಿಮಾ ವಿವಾದದ ಸುಳಿಯಲ್ಲಿದೆ. ಪದ್ಮಿನಿ ಹೆಸರಿನ ರಾಣಿಯೇ ಇರಲಿಲ್ಲ ಎನ್ನುವವರೂ ಇದ್ದಾರೆ. ಆದರೆ ಚಿತ್ತೋರಗಢ ಕೋಟೆಗೆ ನೀವು ಪ್ರವಾಸ ಹೋದರೆ ಅಲ್ಲಿ ನಿಮಗೆ ಕೊಳದ ಮಧ್ಯೆ ಇರುವ ರಾಣಿ ಪದ್ಮಿನಿಯ ಮೂರಂತಸ್ತಿನ ಅರಮನೆ ಕಾಣಸಿಗುತ್ತದೆ.

■ ಚಿತ್ರ– ಲೇಖನ: **ಗೀತಾ ಕುಂದಾಪುರ**

ಎಲ್ಲೆಲ್ಲೂ ಕೋಟೆಗಳು, ಅರಮನೆಗಳ ರಾಜಸ್ತಾನದ ಚಿತ್ತೋರಗಢ ಕೋಟೆಯೊಳಗೊಂದು ಸುತ್ತು ಹಾಕಿದಾಗ ದೀಪಿಕಾ ಪಡುಕೋಣೆ ಅಭಿನಯದ ‘ಪದ್ಮಾವತಿ’ ಸಿನಿಮಾ ವಿವಾದ ನೆನಪಾಯಿತು. ಆಕೆಯ ‘ಘೂಮರ್’ ಹಾಡಿನ ಕುಣಿತ ಮನೆಮಾತಾಗಿರುವಾಗ ಇಲ್ಲಿನ ರಾಣಿ ಪದ್ಮಿನಿ ಅರಮನೆ ನೋಡಬೇಕೆಂಬ ಕುತೂಹಲ ಉಕ್ಕುವುದು ಸಹಜವೇ.

ಸುಮಾರು 700 ಎಕರೆ ಜಾಗವನ್ನು ಸುತ್ತುವರೆದಿರುವ ಭಾರತದ ಅತೀ ದೊಡ್ಡದಾದ ಈ ಕೋಟೆ ‘ಯುನಿಸ್ಕೊ ವರ್ಲ್ಡ್ ಹೇರಿಟೇಜ್ ಸೈಟ್’ ಎಂದು ಗುರುತಿಸಲ್ಪಟ್ಟಿದೆ. ಬೆರಾಕ್ ನದಿಯ ದಂಡೆಯಲ್ಲಿ 180ಮೀಟರ್ ಎತ್ತರದ ಬೆಟ್ಟದ ಮೇಲೆ ಮೌರ್ಯ ಅರಸರು 7ನೇಯ ಶತಮಾನದಲ್ಲಿ ಈ ಕೋಟೆಯನ್ನು ಕಟ್ಟಿಸಿದರು. ಚಿತ್ರಾಂಗದ ಮೌರ್ಯನ ಹೆಸರೇ ಇದಕ್ಕೆ ಬಂದಿದೆ. ಇದು ಮೇವಾಡ ರಾಜರ ರಾಜಧಾನಿಯಾಗಿತ್ತು.

ಕೋಟೆ ಮೂರು ಸಲ ಶತ್ರುಗಳ ದಾಳಿಗೆ ತುತ್ತಾಯಿತು. 1303 ರಲ್ಲಿ ರಾಜ ರಾಣಾ ರತನ್ ಸಿಂಗ್‌ನ ಸೈನ್ಯವನ್ನು ಅಲಾವುದ್ದೀನ್ ಖಿಲ್ಜಿ ಸೋಲಿಸಿದರೆ, 1535ರಲ್ಲಿ ಗುಜರಾಥಿನ ಸುಲ್ತಾನ ಬಹದ್ದೂರ್ ಷಾ ಬಿಕ್ರಮ್‌ಜಿತ್ ಸಿಂಗನನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡನು. 1567 ರಲ್ಲಿ ಅಕ್ಬರನ ಸೈನ್ಯವು ಹನ್ನೊಂದನೆಯ ಮಹಾರಾಣಾ ಉದಯ್ ಸಿಂಗ್ ಸೈನ್ಯವನ್ನು ಸೋಲಿಸಿತು. ಪ್ರತೀ ಸಲ ರಜಪೂತರ ಸೈನಿಕರು, ಆಡಳಿತ ವರ್ಗದವರು, ಮಹಿಳೆಯರು ಶತ್ರುಗಳಿಗೆ ಶರಣಾಗುವುದಕ್ಕಿಂತ ಸಾವೇ ಮೇಲೆಂದರು. ಸಾವಿರಾರು